**ದಿನಾಂಕಃ 26-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಮ್.ಹೆಚ್.ಡಬ್ಲ್ಯೂ ಪರವಾಗಿ ಆರೋಪಿ ಪರ ವಕೀಲರಿಂದಃ**

ನಾನು ಕಿತ್ತೂರು ರಾಣಿ ಚೆನ್ನಮ್ಮ ಬ್ಯಾಂಕ್‌ನಲ್ಲಿ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದೇನೆ. ಪ್ರಕರಣ ನಡೆಸಲು ನನಗೆ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ ಅಂದರೆ ಸರಿ. ಅಧಿಕಾರ ಪತ್ರವನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ ಅಂದರೆ ನೆನಪಿಲ್ಲ. ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ದಾಖಲೆಗಳಲ್ಲಿ ಅಧಿಕಾರ ಪತ್ರ ಇರುವುದಿಲ್ಲ ಅಂದರೆ ಇರುವುದಿಲ್ಲ. ನಿಮಗೆ ಪ್ರಕರಣವನ್ನು ನಡೆಸಲು ಯೋಗ್ಯರಲ್ಲ ಅಂದರೆ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ. ಅಧಿಕಾರ ಪತ್ರವನ್ನು ಹಾಜರು ಪಡಿಸದ ಹೊರತು ನಿಮಗೆ ಸಾಕ್ಷಿ ಹೇಳಲು ಬರುವುದಿಲ್ಲ ಹಾಗೂ ಪ್ರಕರಣವನ್ನು ನಡೆಸಲು ಬರುವುದಿಲ್ಲ ಅಂದರೆ ಹಾಜರು ಪಡಿಸುತ್ತೇನೆ ಅಂತಾ ಹೇಳುತ್ತಾರೆ. ದಿನಾಂಕಃ 13.06.2018 ರಂದು ಆರೋಪಿತನಿಗೆ ಲೋನ್ ನೀಡಿರುತ್ತೇನೆ. ಲೋನ್ ಕೊಡುವ ಪೂರ್ವದಲ್ಲಿಯೇ ಎಲ್ಲ ಕಾಗದ ಪತ್ರಗಳಿಗೆ ಆರೋಪಿಯಿಂದ ಸಹಿ ಪಡೆದಿರುತ್ತೇನೆ ಅಂದರೆ ಲೋನ್ ಕೊಟ್ಟ ನಂತರವೇ ಸಹಿ ಪಡೆದಿರುತ್ತೇನೆ. ಲೋನ್‌ನ್ನು ಕೊಡುವಾಗ ಭದ್ರತೆಗಾಗಿ ಆರೋಪಿ ಕಡೆಯಿಂದ ಖಾಲಿ ಚೆಕ್ಕನ್ನು ಪಡೆದಿರುತ್ತೇನೆ ಅಂದರೆ ಸರಿಯಲ್ಲ. ನೀವು ಆರೋಪಿಗೆ ರೂ.2,50,000/- ಲೋನ್ ನೀಡಿರುತ್ತೀರಿ ಅಂದರೆ ಸರಿ. ನಿಪಿ-1 ಚೆಕ್‌ನಲ್ಲಿ ರೂ.3,32,561/- ಅಂತಾ ಬರೆದುಕೊಂಡಿರುತ್ತೀರಿ ಅಂದರೆ ನಾನು ಬರೆದಿರುವುದಿಲ್ಲ, ಆರೋಪಿ ಬರೆದುಕೊಟ್ಟಿರುತ್ತಾನೆ. ನೀವು ಆರೋಪಿತನ ಮೇಲೆ ಬಡ್ಡಿಯನ್ನು ಸೇರಿಸಿ ನಗದೀಕರಣಕ್ಕೆ ಹಾಜರು ಪಡಿಸಿರುತ್ತೀರಿ ಅಂದರೆ ಆರೋಪಿ ಲೋನ ತೆಗೆದುಕೊಂಡಾಗಿನಿಂದ ಹಣ ಪಾವತಿ ಮಾಡಿರುವುದಿಲ್ಲ. ನೀವು

ರೂ.3,32,561/- ಯಾವ ದಿನಾಂಕದಿಂದ ಸೇರಿಸಿ ಬಡ್ಡಿ ಹಾಕಿರುತ್ತೀರಿ ಅಂದರೆ ಲೋನ್ ಪಡೆದ ದಿನಾಂಕಃ 20.01.2020 ರವರೆಗೆ ಬಡ್ಡಿಯನ್ನು ಸೇರಿಸಿರುತ್ತೇವೆ. ದಿನಾಂಕಃ 20.01.2020 ಕ್ಕೆ ಆರೋಪಿಯ ಹಣ ಬಾಕಿ ಇದೆ ಅಂತಾ ತೋರಿಸಲು ಬ್ಯಾಂಕಿನ ಸ್ಟೇಟಮೆಂಟನ್ನು ಹಾಜರು ಪಡಿಸಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲು ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

-Sd/-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.